ಚಾರದ ಆವಾದನೆಗೆ ಒಳಗಾಗಿರಂವವರನ್ನು ಅಮಾನತ್ತಿನಲ್ಲಿಟ್ಟರೆ ಸಾಲದು, ಅವರ ಪ್ರಾಪರ್ಟಿಯನ್ನು ಸೀಸ್ ಮಾಡಬೇಕು. ಇದರ ಬಗ್ಗೆ ಆಯೋಗದ ಶಿಫಾರಸ್ಸು ಏನು ?

ಅಧ್ಯಕ್ಷರು.—ಇಲ್ಲವೆಂದು ಹೇಳಿದ್ದಾರೆ.

ಶ್ರೀ ಪಿ. ರಾಂದೇವ್.—ನಾನು ಎಲ್ಲಾ ಮಾಹಿತಿಯನ್ನು ಹೊಂದಿದ್ದೇನೆ, ಅದನ್ನು ನಾನು ಸದನಕ್ಕೆ ಕೊಡಬೇಕಾಗುತ್ತದೆ. ಆದ್ದರಿಂದ, ಯಾವುದನ್ನು ಸರ್ಕಾರ ಮುಚ್ಚಿಡುವುದಕ್ಕೆ ಹೋಗಬಾರದು. ಪ್ರೊಪೋಸಲ್ಲನ್ನು ಬಯಲಿಗೆ ಎಳೆಯಿರಿ. ಆಯೋಗದ ಶಿಫಾರಸ್ಸನ್ನು ಸದನದ ಮುಂದಿಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಕ್ರಿಮಿನಲ್ ಕೇಸನ್ನು ಫೈಲ್ ಮಾಡುವುದಕ್ಕೆ ಸಿ.ಓ.ಡಿ.ಯವರು ಇನ್‌ವೆಸ್ಟಿಗೇಟ್ ಮಾಡುತ್ತಿದ್ದಾರೆ. ಅದು ಬಂದ ಮೇಲೆ ಕ್ರಿಮಿನಲ್ ಕೇಸನ್ನು ಫೈಲ್ ಮಾಡುತ್ತೇವೆ.

ಶಿಕ್ಷಣ ಇಲಾಖೆಯಲ್ಲಿ ಸೇವಾ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸುವುದು

೧೨೪. ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ (ಕೊಪ್ಪಳ),—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

೧). ಶಿಕ್ಷಣ ಇಲಾಖೆಯಲ್ಲಿ ಸೇವಾ ಜೇಷ್ಠತಾ ಪಟ್ಟಿ ಪ್ರಕಟಿಸದಿರಲು ಕಾರಣಗಳೇನು ? ೩೨ನೆಯ ವಿಧಿ ಈ ಇಲಾಖೆಯಲ್ಲಿ ವ್ಯಾಪಕವಾಗಿರಲು ಕಾರಣಗಳೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(೧) ಶಿಕ್ಷಣ ಇಲಾಖೆಯಲ್ಲಿ ಒಂದು ಮತ್ತು ಎರಡನೇ ದರ್ಜೆಯ ಜೇಷ್ಠತಾ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿದೆ. ಪ್ರೌಢಶಾಲಾ ಶಿಕ್ಷಕರ (ಮೂರನೇ ದರ್ಜೆ) ಸರ್ಕಾರಿ ವಲಯದ ತಾತ್ಕಾಲಿಕ ಜೇಷ್ಠತಾ-ಪಟ್ಟಿಗಳನ್ನು ಈಗಾಗಲೇ ಪ್ರಕಟಿಸಲಾಗಿದೆ ಮತ್ತು ಇದರ ಅಂತಿಮ ಪಟ್ಟಿಯನ್ನು ಸಿದ್ಧಗೊಳಿಸಲಾಗುತ್ತಿದೆ. ಸರ್ಕಾರದ ವಶಕ್ಕೆ ತೆಗೆದುಕೊಂಡ ತಾಲ್ಲೂಕು ಅಭಿವೃದ್ಧಿ ಮಂಡಳಿ ಮತ್ತು ಪುರಸಭೆ ವಲಯಗಳಿಗೆ ಸಂಬಂಧಪಟ್ಟ ಜೇಷ್ಠತಾ ಪಟ್ಟಿಯನ್ನು ಅಂತಿಮವಾಗಿ ಪ್ರಕಟಿಸಲಾಗಿದೆ. ಕಿರಿಯ ಕಾಲೇಜು ಉಪನ್ಯಾಸಕರ ಜೇಷ್ಠತಾ ಪಟ್ಟಿಯನ್ನು ಶೀಘ್ರದಲ್ಲಿಯೇ ಪ್ರಕಟಿಸಲಾಗುವುದು.

೧-೧೧-೫೬ರ ಅಂತರ ರಾಜ್ಯ ಹಿರಿತನದ ಪಟ್ಟಿ ೧೯೭೬ರ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿ ಮಾಡಬೇಕಾದ್ದರಿಂದಲೂ, ೧-೪-೭೧ರಿಂದ ೧-೧-೭೭ರವರೆಗೆ ಹಂತಹಂತವಾಗಿ ಸ್ಥಳೀಯ ಸಂಸ್ಥೆಗಳ ಶಾಲೆಗಳನ್ನು ಸರ್ಕಾರ ವಹಿಸಿಕೊಂಡಿದ್ದರಿಂದಲೂ ೧೯೭೮ರಲ್ಲಿ ಬಡ್ತಿಯ ಬಗ್ಗೆ ಸರ್ಕಾರಿ ತಾಲ್ಲೂಕು ಅಭಿವೃದ್ಧಿ ಮಂಡಳಿ ಹಾಗೂ ಪುರಸಭೆಗಳಿಂದ ಬಂದ ಪ್ರೌಢಶಾಲಾ ಶಿಕ್ಷಕರಿಗೆ ಅನುಪಾತ (ಪ್ರೊಪೋರ್ಶನ್)ವನ್ನು ನಿರ್ಧರಿಸಿದ್ದರಿಂದಲೂ, ೧೯೭೯ರಲ್ಲಿ ಪ್ರೌಢಶಾಲಾ ಉಪಾಧ್ಯಾಯರಿಗೆ ಬಡ್ತಿಗೆ ಇದ್ದ ಸೌಲಭ್ಯವನ್ನು ಭಾಷಾ ಉಪಾಧ್ಯಾಯರಿಗೆ ವಿಸ್ತರಿಸಿದ್ದರಿಂದಲೂ ಸೇವಾ ಜೇಷ್ಠತಾ ಪಟ್ಟಿ ತಯಾರಾಗಲು ವಿಳಂಬವಾಯಿತು.

ಲೋಕ ಸೇವಾ ಆಯೋಗದಿಂದ ಆಯ್ಕೆ ಪಟ್ಟಿ ಪ್ರಕಟಿಸದೆ ಇರುವುದರಿಂದಲೂ ಹಾಗೂ ಜೇಷ್ಠತಾ ಪಟ್ಟಿ ಅಂತಿಮವಾಗಿ ತಯಾರಾಗದೆ ಇರುವುದರಿಂದಲೂ ಶಾಲಾ ಕಾಲೇಜುಗಳಲ್ಲಿ ಪಾಠ ಪ್ರವಚನಗಳಿಗೆ ತೊಂದರೆಯಾಗದಂತೆ, ನಿಯಮ ೩೨ರ ಮೇರೆಗೆ ಅರ್ಹ ಉಪಾಧ್ಯಾಯರನ್ನು ಖಾಲಿ ಹುದ್ದೆಗಳಿಗೆ ನೇಮಕ ಮಾಡಲಾಗಿದೆ.

ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ.—ಶಿಕ್ಷಣ ಇಲಾಖೆಯಲ್ಲಿ ೧೯೭೧ರಿಂದ ಇಲ್ಲಿಯವರೆಗೆ ಜೇಷ್ಠತಾ ಪಟ್ಟಿ ಅಂತಿಮವಾಗಿ ನಿರ್ಣಯವಾಗಿಲ್ಲ. ತಾಲ್ಲೂಕು ಅಭಿವೃದ್ಧಿ ಮಂಡಲಿ ಮತ್ತು ಪುರಸಭೆಗಳಿಂದ ಬಂದ ಪ್ರೌಢಶಾಲಾ ಶಿಕ್ಷಕರಿಗೆ ಅನುಪಾತವನ್ನು ನಿರ್ಧರಿಸಿದ್ದರಿಂದಲೂ ಮತ್ತು ೧೯೭೯ರಲ್ಲಿ ಪ್ರೌಢಶಾಲಾ ಉಪಾಧ್ಯಾಯರಿಗೆ ಇದ್ದ ಬಡ್ತಿ ಸೌಲಭ್ಯವನ್ನು ಭಾಷಾ ಶಿಕ್ಷಕರಿಗೆ ವಿಸ್ತರಿಸಿದ್ದರಿಂದಲೂ ಸೇವಾ ಜೇಷ್ಠತಾ ಪಟ್ಟಿ ತಯಾರಾಗಲು ವಿಳಂಬವಾಯಿತು ಎಂದು ಹೇಳಿದ್ದಾರೆ. ಹಾಗಾದರೆ ಅಂತಿಮವಾಗಿ ಇನ್ನು ಎಷ್ಟು ದಿನಗಳಲ್ಲಿ ಆ ಪಟ್ಟಿಯನ್ನು ತಯಾರಿಸುತ್ತೀರಿ ?

ಶ್ರೀ ಬಿ. ರಾಚಯ್ಯ.—ಈಗ ಅಂತಿಮ ಘಟ್ಟದಲ್ಲಿದ್ದೇವೆ. ಬಹುಶಃ ಮುಂದಿನ ಆಧಿವೇಶನ ಬರುವುದರೊಳಗೆ ಖಾಲಿ ಹುದ್ದೆಗಳನ್ನು ಕರ್ತಿ ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ್.—ಒಂದು ವಾರದ ಕೆಳಗೆ ತಾವು ೬ ಜನರಿಗೆ ಕ್ಲಾಸ್-೨ನಿಂದ ಕ್ಲಾಸ್-೧ಕ್ಕೆ ಪ್ರೊಮೋಷನ್ ಕೊಟ್ಟಿದ್ದೀರಿ. ಆ ಆರು ಜನರಿಗೆ ಮಾತ್ರ ಹೇಗೆ ಕೊಟ್ಟಿರಿ ? ಅಲ್ಲಿ ೪೬ ಹುದ್ದೆಗಳು ಖಾಲಿ ಇವೆ. ಅವನ್ನು ಸಹ ಏತಕ್ಕೆ ತುಂಬಲಿಲ್ಲ ?

ಶ್ರೀ ಬಿ. ರಾಚಯ್ಯ.—ಸಾಮಾನ್ಯ ಅರ್ಹತಾ ಪಟ್ಟಿ ಬೇರೆ ಆಡಲ್ಟ್ ಲಿಟರಸಿಯದು ಬೇರೆ ಇತ್ತು ಮತ್ತು ಅವರು ಸೇವೆಯಲ್ಲಿದ್ದುದರಿಂದ ಆ ಆರು ಜನರ ಪಟ್ಟಿ ತಯಾರಾಗಿತ್ತು. ಅದಕ್ಕೋಸ್ಕರ ಕೊಟ್ಟಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ್.—ಈ ತಾರತಮ್ಯ ಏತಕ್ಕೆ ಆಯಿತು ಎಂದು ಕೇಳುತ್ತಿದ್ದೇನೆ. ಆರ್ಟಿಕಲ್ ೩೨೮ ಪ್ರಕಾರ ಶಿಕ್ಷಣ ಇಲಾಖೆಯಲ್ಲಿ ಯಾರು ಬಡ್ತಿಗೆ ಅರ್ಹರಿರುತ್ತಾರೋ ಅಂಥವರಿಗೆ ಏತಕ್ಕೆ ಬಡ್ತಿ ನೀಡುತ್ತಿಲ್ಲ ?

ಶ್ರೀ ಬಿ. ರಾಚಯ್ಯ.—ಪಟ್ಟಿ ತಯಾರು ಮಾಡಿ ಪಬ್ಲಿಷ್ ಮಾಡಬೇಕು ಆ ಮೇಲೆ ಬಡ್ತಿ ನೀಡಬೇಕು. ಪಟ್ಟಿ ತಯಾರಾದ ತಕ್ಷಣ ಸೀನಿಯಾರಿಟಿ ಪ್ರಕಾರ ಯಾರಿಗೆ ಬಡ್ತಿ ಕೊಡಬೇಕಾಗಿತ್ತೋ ಅವರಿಗೆ ಆರ್ಟಿಕಲ್ ೩೨೮ ಪ್ರಕಾರ ಕೊಟ್ಟಿದ್ದೇವೆ. ಅದನ್ನು ರೆಗ್ಯುಲರೈಸ್ ಮಾಡುತ್ತೇವೆ.

ಬೆಂಗಳೂರು ಹಾಗೂ ರಾಯಪುರದಲ್ಲಿರುವ ಹಾಲಿನ ಡೈರಿಗಳಲ್ಲಿ ಉತ್ಪಾದನೆಯಾಗುತ್ತಿರುವ ಹಾಲಿನ ಪ್ರಮಾಣ

೧೨೦. ಶ್ರೀ ಎಂ. ಜಿ. ಜರತಾರ್‌ಗರ್ (ಹುಬ್ಬಳ್ಳಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಪಶುವೈದ್ಯ ಪಶುಸಂಗೋಪನಾ ಹಾಗೂ ತೋಟಗಾರಿಕೆ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ಬೆಂಗಳೂರು ಹಾಗೂ ಹುಬ್ಬಳ್ಳಿ-ಧಾರವಾಡ ವಿಧ್ಯದಲ್ಲಿರುವ ರಾಯಪುರ ಈ ಎರಡೂ ಹಾಲಿನ ಡೇರಿಗಳು ಪ್ರಾರಂಭವಾದದ್ದು ಯಾವ ವರ್ಷ ಹಾಗೂ ಅವುಗಳ ಹಾಲಿನ ಉತ್ಪಾದನೆ ಪ್ರಮಾಣ ಎಷ್ಟು ?

(ಆ) ೧೯೮೦ರಿಂದ ೮೨ರಲ್ಲಿ ಹಾಲು ಕೆಟ್ಟ (ಉದಾ) ಪ್ರಕರಣಗಳೆಷ್ಟು ಮತ್ತು ಅದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಇ) ಮೇಲ್ಕಂಡ ಎರಡು ಡೈರಿಯವರು ಕೊಳ್ಳುವ ಹಾಗೂ ಮಾರಾಟ ಹಾಲಿನ ಬೆಲೆ ಪ್ರಾರಂಭದಿಂದಲೂ ಈವರೆಗೆ ಎಷ್ಟು ಸಾರಿ ಏರಿಸಿದ್ದಾರೆ ಹಾಗು ಯಾವ ವರ್ಷ ಎಷ್ಟು ಸಾರಿ ಹೆಚ್ಚಿಸಿದ್ದಾರೆ ವಿವರ ತಿಳಿಯಪಡಿಸುವಿರಾ ?

(ಈ) ಮೇಲ್ಕಂಡ ಎರಡು ಡೈರಿಯವರು ವಿಕ್ರಯ ಮಾಡುವ ಹಾಲಿನ ಕೇಂದ್ರದವರಿಗೆ ಕಮಿಷನ್ ಪ್ರಾರಂಭದಿಂದಲೂ ಕೊಡುತ್ತಿದ್ದುದು ಎಷ್ಟು ಹಾಗು ಈವರೆಗೆ ಎಷ್ಟು ಸಾರಿ ಕಮಿಷನ್ ದರ ಹೆಚ್ಚಿಸಲಾಗಿದೆ ಅನ್ನುವುದು ತಿಳಿಸುತ್ತೀರಾ ?

(ಉ) ಈ ಹಿಂದೆ ಹಾಲಿನ ಕೇಂದ್ರದವರು ಬೆಂಗಳೂರು ಹಾಗು ಹುಬ್ಬಳ್ಳಿ ಧಾರವಾಡಗಳಲ್ಲಿ ಕಮೀಶನ್ ಹೆಚ್ಚಿಸುವಂತೆ ಅನೇಕ ಸಾರಿ ಮನವಿಗಳನ್ನು ಮಾಡಿಕೊಂಡಾಗ್ಗೆ ನಿರ್ದೇಶಕರು ಹಾಗು ಆಡಳಿತ ನಿರ್ದೇಶಕರು ಹಾಲಿನ ರೇಟು ಹೆಚ್ಚಿಸಿದ್ದಾಗ್ಗೆ ಕಮಿಷನ್ನು ಸಹಾ ಹೆಚ್ಚಿಸುವುದಾಗಿ ಆಶ್ವಾಸನೆ ಕೊಟ್ಟಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ಪಶುಸಂಗೋಪನಾ ಮತ್ತು ತೋಟಗಾರಿಕೆ ಮಂತ್ರಿಗಳು).—

(ಅ) ಬೆಂಗಳೂರು ಡೈರಿ ದಿನಾಂಕ ೨೩-೧-೧೯೫೫ರಂದು ಸ್ಥಾಪಿತವಾಯಿತು ಮತ್ತು ಅದರ ನಿರ್ವಹಣಾ ಸಾಮರ್ಥ್ಯ ದಿನ ಒಂದಕ್ಕೆ ೧,೫೦,೦೦೦ ಲೀಟರುಗಳು.

ರಾಯಪುರ ಡೈರಿ ದಿನಾಂಕ ೧೮-೧೨-೬೮ರಂದು ಸ್ಥಾಪಿತವಾಯಿತು ಮತ್ತು ಅದರ ನಿರ್ವಹಣ ಸಾಮರ್ಥ್ಯ ದಿನ ಒಂದಕ್ಕೆ ೧೫೦೦೦–೧೭೦೦೦ ಲೀಟರುಗಳು.

(ಆ) ೧೯೮೦ರಿಂದ ೧೯೮೩ರವರೆಗೆ ಬೆಂಗಳೂರು ಡೈರಿಯ ಕೆಟ್ಟ ಹಾಲಿನ ವಿವರಣೆ ಅನುಬಂಧ ೨ ನಲ್ಲಿ ತೋರಿಸಲಾಗಿದೆ.